# ಒಬ್ಬಂಟಿ

ಹಲ್ಲುಜ್ಜದೇ ಹಾಳು ಮುಖದಲ್ಲಿ ಹಾಗೇ ಎದ್ದು ಕೂತಿದ್ದೆ, ಆಕಳಿಸುತ್ತ ಅತ್ತಿತ್ತ ನೋಡುತ್ತ ಎನೂ ಮಾತಿಲ್ಲದೇ, ಮಾತನಾಡಲೇಬೇಕೆನ್ನಿಸುತ್ತಿರಲಿಲ್ಲ. ಅವಳೊ ಆಗಲೇ ಎದ್ದು ಏನೋ ಕೆಲಸದಲ್ಲಿ ನಿರತಳಾಗಿದ್ದಳು, ಎಂದಿನಂತಾಗಿದ್ದರೆ ಎನೋ ತುಂಟಾಟ ಮಾಡುತ್ತ ಅವಳ ಕಾಡಿಸುತ್ತಿದ್ದೆ, ಇಂದೇಕೊ ಮನಸಿರಲಿಲ್ಲ, ಮನದಲ್ಲಿನ ಮಾತುಗಳೆಲ್ಲ ಮಾತಾಡಿ ಮಾತಾಡಿ ಖಾಲಿಯಾಗಿ ಹೋದವೇನೊ ಅನ್ನಿಸುತ್ತಿತ್ತು. ಮತ್ತೆ ಹೊದ್ದು ಎದ್ದೇಳದಂತೆ ಮಲಗಿಬಿಡಲೇನೊ ಅಂದರೂ ನಿದ್ರೆ ಕೂಡ ಹತ್ತಿರ ಸುಳಿಯದಂತೆ ಓಡಿ ಹೋಗಿತ್ತು, ಮನೆಯಲ್ಲಿ ವಟಗುಡುತ್ತಿರುವ ಎಫ್‌ಎಂನ ರೇಡಿಯೋ ಜಾಕಿ, ಹೊರಗೆ ಚಿಲಿಪಿಲಿಗುಡುತ್ತಿರುವ ಹಕ್ಕಿ, ಕಸಗುಡಿಸುತ್ತಿರುವ ಪಕ್ಕದಮನೆ ಪದ್ದುನ ಪೊರಕೆ ಸದ್ದು, ಓಣಿಯಲ್ಲಿ ಪ್ರತಿಧ್ವನಿಸುತ್ತಿದ್ದ ಹೂವಾಡಗಿತ್ತಿ ಗುಲಾಬಿಯ ಕೂಗು, ಏನೊಂದು ಕೇಳಿದರೂ ಕೇಳಿಸದಂತೆ ಆವರಿಸಿತ್ತು ನಿಶಬ್ದ, ನನ್ನ ಮೌನಕ್ಕೆ ಜತೆಯಾಗಲೆಂದು. ಆ ನೀರಸ ಮೌನಕ್ಕು ಕೂಡ ನಿಶಬ್ದ ಜತೆಯಾದರೆ, ನಾನೊಬ್ಬನೇ ಯಾಕೊ ಒಬ್ಬಂಟಿಯಾದಂತಿತ್ತು.

ಮದುವೆಯಾಗಿ ಮಡದಿ ಮನೆಯಲ್ಲಿದ್ದು, ಮನೆತುಂಬ ಮಕ್ಕಳಿರಲವ್ವ ಅಂತ ಹರಸುವ ಹೊತ್ತಿನಲ್ಲಿ, ಇವನ್ಯಾಕೆ ಒಬ್ಬಂಟಿಯಾದಾನು ಅಂದಿರಾ, ಸುತ್ತ ಸಂತೆ ಸೇರಿದ್ದರೂ ಒಮ್ಮೊಮ್ಮೆ ಹೀಗೆ ಏಕಾಂಗಿ ಅನಿಸಿಬಿಡುತ್ತದೆ, ಈ ಮನಸೇ ಹಾಗೆ, ಯಾರೂ ಇಲ್ಲದ ಹೊತ್ತಿನಲ್ಲಿ ಯಾರನ್ನೊ ಕಲ್ಪಿಸಿಕೊಂಡು ಕನಸು ಕಟ್ಟುವ ಮನಸು, ಎಲ್ಲರಿದ್ದರೂ ಎಲ್ಲೊ ದೂರ ಹೋಗಿ ಒಬ್ಬಂಟಿಯಂತೆ ನಿಂತು ಬಿಡುತ್ತದೆ. ಇನ್ನೊಂದು ಬಾರಿ ಬಾಯಿತುಂಬ ಆಕಳಿಸಿ, ಮೈಮುರಿದು ಮೇಲೆದ್ದವನು ಮತ್ತೇನೂ ಮಾಡಲು ಇಲ್ಲವೇನೊ ಅನ್ನುವಂತೆ ಮತ್ತೆ ಅಲ್ಲೇ ಕುಳಿತೆ, ಅವಳು ಬಂದಳು.

ದಿಕ್ಕೆಟ್ಟು ದೇವರ ನೆನೆಸುತ್ತಿದ್ದಂತೆ ಕೂತವನನ್ನು ನೋಡಿ, ಅಲುಗಿಸಿ ಏನಾಯ್ತು ಅನ್ನೊವಂತೆ ಹುಬ್ಬು ಹಾರಿಸಿದಳು, ಸುಮ್ಮನೇ ನಕ್ಕೆ, "ಏನು ಮೌನವ್ರುತಾನಾ, ಮಾತಾಡೊಲ್ವಾ" ಅಂತಂದಳು, ಅವಳಿಗೆ ಗೊತ್ತಾಗಿತ್ತು ಒಂದು ಮಾತಾಡಿದರೆ ಹತ್ತು ಹಲವು ಹರಟೆ ಹೊಡೆಯುವವ ಸುಮ್ಮನೇ ಕೂತಿದ್ದರೆ ಗೊತ್ತಾಗದಿದ್ದೀತೆ. ಮತ್ತೇನೂ ಮಾತೇ ಹೊರಡದಿದ್ದಾಗ, ಅವಳೂ ಒಂದು ಸಾರಿ ಹಲ್ಲು ಕಿರಿದು ಹೊರಟು ಹೋದಳು, ಈ ಮಾತಿನ ಮಷೀನಿನ ಬ್ಯಾಟರಿ ಬಿಸಿಯಾಗಲು ಸ್ವಲ್ಪ ಸಮಯ ಬೇಕೇನೊ, ಇನ್ನೊಂದಿಷ್ಟು ಹೊತ್ತಾದರೆ ತಾನೇ ಸರಿಹೊಗುತ್ತದೆಂದು. ಮೌನ ಮಾತಾಡು ನೋಡೊಣ ಅಂತ ಮುಂದೆ ಕೂತಿದ್ದರೂ ಮತ್ತೆ ನಾನು ಒಬ್ಬಂಟಿಯೇ.

ಹಲ್ಲಿನೊಂದಿಗೆ ಬ್ರಷು ತೆಕ್ಕೆ ಹಾಯ್ದು ನಾನಿನ್ನ ಜತೆಯಿದ್ದೇನೆ ಅನ್ನುತ್ತಿದೆಯೇನೊ ಅನ್ನುವಂತೆ ಹಲ್ಲುಜ್ಜಿದೆ, ಬಕೆಟ್ಟಿಗೆ ಜತೆಯಾಗಿ ತೂಗುಬಿದ್ದಿದ್ದ ಮಗ್ ಕಿತ್ತುಕೊಂಡು ಮುಖ ತೊಳೆದರೆ, ನೀರಿಗೆ ಜತೆಯಾಗಿ ಸೋಪು ತೊಳೆದು ಹೋಯ್ತು. ಜಗತ್ತಿನಲ್ಲಿ ಎಲ್ಲ ಜತೆ ಜತೆಯಾಗೇ ಇದೆ, ನಾನೊಬ್ಬನೇ ಒಬ್ಬಂಟಿಯೇನೊ ಅಂತ ಅಣಕಿಸಿದಂತೆ. ಹಾಗೆ ನೋಡಿದರೆ ನಾನೆಲ್ಲಿ ಒಬ್ಬಂಟಿ ಇದ್ದಾಳಲ್ಲ ನನ್ನಾಕೆ ಅಂತ ಅವಳಿದ್ದಲ್ಲಿಗೇ ಹೋದೆ, ಮಾತಾಡುವ ಮಲ್ಲಿ, ಮಾತಿಲ್ಲದೇ ಕೈಗೆ ಕಾಫಿ ಕಪ್ಪಿತ್ತಳು, ಕಪ್ಪಿನ ಜತೆ ಬಸಿ(ಸಾಸರ್) ಕೂಡ ಬಂತು ಜತೆಯಾಗಿ. ಹಾಗೇ ಹೊರಗೆ ಬಂದು ಓದಲೆಂದು ಪೇಪರು ಕೈಗೆತ್ತಿಕೊಂಡೆ ಸಪ್ಲಿಮೆಂಟು ಉಚಿತವಾಗಿ ಅದರ ಜತೆ ಸೇರಿಕೊಂಡಿತ್ತು. ಓದಲೂ ಮನಸಿಲ್ಲದೇ ಅದನ್ನಲ್ಲೇ ಬೀಸಾಕಿ, ಬಿಸಿ ಬಿಸಿ ಕಾಫಿ ಹೀರಿದರೆ ಕಾಫಿ ಪುಡಿಗೆ ಹಾಲು ಸಕ್ಕರೆ ಕೂಡಿತ್ತು.

ಅಲ್ಲೇ ಬಂದು ಅವಳೂ ಪಕ್ಕ ಕೂತಳು, "ಮುಂಜಾನೆಯಿಂದ ನೋಡ್ತಾ ಇದೀನಿ, ಏನಾಗಿದೆ ನಿಮಗೆ, ಮಾತಿಲ್ಲ ಕಥೆಯಿಲ್ಲ" ಅಂತ ಮತ್ತೆ ಕೆದಕಿದಳು, ಧೀರ್ಘ ನಿಟ್ಟುಸಿರು ಬಿಟ್ಟು, "ಯಾಕೊ ಒಬ್ಬಂಟಿ ಅಂತ ಅನಿಸ್ತಾ ಇದೆ, ಮಾತನಾಡಲೇ ಮನಸಿಲ್ಲ, ಒಂಥರಾ ಬೇಜಾರು" ಅಂತ ಹೇಳಿದೆ, ಅವಳಿಗೇನು ಹೇಳಬೇಕೊ ತಿಳಿಯಲಿಲ್ಲ, ಸಪ್ತಪದಿ ತುಳಿದು ಸಂಗಾತಿಯಾಗಿರುತ್ತೇನೆ ಅಂತ ವಚನವಿತ್ತವನೇ, ಯಾಕೊ ಒಬ್ಬಂಟಿ ಅನಿಸ್ತಾ ಇದೆ, ಅಂದರೆ ಏನು ಹೇಳಿಯಾಳು. "ನಾನಿಲ್ಲವೇ ಇಲ್ಲಿ, ನೀವ್ಯಾಕೆ ಒಬ್ಬಂಟಿ, ಏನೇನೊ ಮಾತಾಡಬೇಡಿ ನೀವು" ಅಂತ ಹತ್ತಿರ ಬಂದು ಕೈಹಿಡಿದುಕೊಂಡು ಕೂತಳು, ಅವಳಿಗೇನು ಅಂತ ಹೇಳಲಿ, ಅವಳು ನಾನು ಅಂತ ಬೇರೆ ಬೇರೆಯಾದರೆ ಅವಳಿಗೆ ನಾ ಜತೆ, ನನಗವಳು ಆಗಬಹುದೇನೊ, ಆದರೆ, ನಾನು ನನ್ನಾಕೆ ಒಂದೇ ಆದರೆ... ಅಲ್ಲಿ ಜತೆ ಯಾರು. ನನಗವಳು ಜತೆ ಅಂತ ಹೇಳಿ ಅವಳ ನನ್ನಿಂದ ಬೇರೆ ಮಾಡಲೇ, **ನಾನು ಅವಳು ಇಬ್ಬರೇ?, ಇಬ್ಬರೂ ಸೇರಿ ಒಬ್ಬರೇ? ಒಬ್ಬರೇ ಆದರೆ ಒಬ್ಬಂಟಿ ಅಲ್ಲವೇ...** ಅಂತ ಏನೇನು ಹುಚ್ಚು ಯೋಚನೆಗಳು ಸುತ್ತ ಮುತ್ತಿಕೊಂಡವು. ಆ ಯೋಚನೆಗಳ ನಡುವೆ ನಾನೊಬ್ಬನೇ ಒಬ್ಬಂಟಿ ಬಂಧಿಯಾಗಿದ್ದೆ.

ಸ್ವಲ್ಪ ಹೊತ್ತು ಸುಮ್ಮನಿದ್ದವಳು, "ಒಮ್ಮೊಮ್ಮೆ ಹಾಗೇ ಒಬ್ಬಂಟಿ ಅನಿಸಿಬಿಡುತ್ತದೆ, ಆದರೆ ಅದ್ಯಾಕೊ ಗೊತ್ತಿಲ್ಲ" ಅಂತ ತನ್ನ ಅಂತರಾಳ ತೆರೆದಳು, ನಾನು ಒಬ್ಬಂಟಿ ಅಂದಿದ್ದಕ್ಕೆ ಅವಳಿಗೂ ಹಾಗೇ ಅನ್ನಿಸಿತೇನೊ ಪಾಪ ಅಂತ "ನಾ ನಿನ್ನೊಂದಿಗೇ ಇದ್ದೇನೆ, ಆದರೂ ಯಾಕೊ ಹೀಗೆ ಅನಿಸ್ತಾ ಇದೆ" ಅಂತ ನನ್ನ ದುಗುಡ ಹೊರತೆಗೆದೆ. "ಒಂದೊಂದು ದಿನ ಮನೇಲಿ ಒಬ್ಳೆ ಇರ್ತೀನಲ್ಲ,

ಆಗಲೂ ಹಾಗೆ ಅನಿಸಿಬಿಡುತ್ತದೆ, ಏನು ಮಾಡಲೂ ತಿಳಿಯುವುದಿಲ್ಲ, ಯಾರಿಗೊ ಫೋನು ಮಾಡಿ ಹರಟುತ್ತೇನೆ" ಅಂತ ತನ್ನನುಭವ ಹೇಳಿದರೆ, "ನನಗೇನೊ ಯಾರೊಂದಿಗೂ ಮಾತಾಡಲೂ ಮನಸಿಲ್ಲ" ಅಂತ ನಾನಂದೆ, ಅವಳೊಂದಿಗೂ ಕೂಡ ಅಂತ ಸುಮ್ಮನೇ ಕೂತಳು.

ಬಹಳ ಹೊತ್ತು ಹಾಗೇ ಕೂತಿದ್ದರೆ ಎಲ್ಲಿ ನಿಜವಾಗಲೂ ಒಬ್ಬಂಟಿಯಾದೇನೊ ಅನ್ನಿಸಿರಬೇಕು ಅವಳಿಗೆ "ನೀವು ಹೀಗೇ ಕೂರೋದಾದ್ರೆ, ಕೂತು ಬಿಡಿ ಒಬ್ಬಂಟಿ ಅಂತ, ನಾ ತವರುಮನೆಗೆ ಹೋಗಿ ಬಿಡ್ತೀನಿ" ಅಂತ ಹೆದರಿಸಿದಳು, "ಮೊದಲೇ ಒಬ್ಬಂಟಿ ಅನಿಸ್ತಾ ಇದೆ, ನೀನೂ ಹೋದರೆ" ಅಂದರೆ, "ಇದಾಳಲ್ಲ ನಿಮ್ಮ ಜತೆ ಪಕ್ಕದ ಮನೆ ಪದ್ದು" ಅಂತ ಕೀಟಲೆಗಿಳಿದಳು, "ಪಕ್ಕದಮನೆ ಬಿಡು, ನನಗೇನೊ ಊರು ಬಿಟ್ಟು ಎಲ್ಲೊ ದೂರ ದಟ್ಟಡವಿಯಲ್ಲಿ ಹೋಗಿ ಸುಮ್ಮನೇ ಕೂತುಬಿಡಬೇಕೆನ್ನಿಸಿದೆ ಒಬ್ಬಂಟಿಯಾಗಿ" ಅಂದೆ. "ಬಟ್ಟೆ ಎಷ್ಟು ಪ್ಯಾಕ್ ಮಾಡಲಿ" ಅಂದ್ಲು, ಈಗ ನಾನು ಕಾಡಿಗೆ ಹೊರಟಿದ್ದೇನೇನೊ ಅನ್ನುವಂತೆ. "ಹಾಗಲ್ಲ, ಅದು ಅನಿಸಿಕೆ ಮಾತ್ರ, ಎಲ್ಲೊ ದೂರ ಬೆಟ್ಟದ ಮೇಲೆ ಹತ್ತಿ ಅದರ ತುಟ್ಟತುದಿಗೆ ಕೂತು ಬಿಡಬೇಕು ಅನ್ನಿಸುತ್ತದೆ" ಅಂದರೆ, "ಇಲ್ಲೇ ಈ ಏಣಿ ಮೇಲೆ ಏರಿ ಕೂರಲೇ ಭಯ, ಇನ್ನು ಬೆಟ್ಟವಂತೂ ದೂರದ ಮಾತು" ಅಂತ ತಳ್ಳಿಹಾಕಿದಳು. "ನಾನೂ ಅದನ್ನೇ ಹೇಳುತ್ತಿರುವುದು, ಅಷ್ಟು ಏಕಾಂಗಿಯಾಗಿಬಿಡಬೇಕು ಅನ್ನಿಸುತ್ತದೆ, ಆದರೆ ಆಗುವುದಿಲ್ಲ, ಅದರೂ ಅನ್ನಿಸುವುದೇಕೆ ಅಂತ ಗೊತ್ತಿಲ್ಲ, **ಕಡಲತೀರದಲ್ಲಿ ಕಾಲಿಗೆ ಅಲೆ ತಾಕುತ್ತಿದ್ದರೆ ಉಸುಕಿನಲ್ಲಿ ಬಿದ್ದುಕೊಂಡು ಒಬ್ಬನೇ ಆಕಾಶದಲ್ಲಿನ ನಕ್ಷತ್ರಗಳನ್ನು ಎಣಿಸಬೇಕೆನ್ನಿಸುತ್ತದೆ.**" ಅಂದರೆ, "ರೀ ನಾನೂ ಜತೆ ಬರ್ತೀನಿ, ಎಣಿಸೋಕೆ ನಿಮ್ಮ ಕೈಬೆರಳು ಸಾಕಾಗಲ್ಲ, ನಾನು ಸ್ವಲ್ಪ ಹೆಲ್ಪ ಮಾಡ್ತೀನಿ" ಅಂತ ದುಂಬಾಲು ಬಿದ್ದಳು. "ಹಾಗೆ ಹೋಗಲು ಬೆಂಗಳೂರಲ್ಲಿ ಯಾವ ಕಡಲೂ ಇಲ್ಲ, ನಾನು ಹೊರಟೂ ಇಲ್ಲ, ಆದರೆ ಹಾಗೆ ಅನಿಸುತ್ತದೆ ಅಂತ ಹೇಳ್ತಾ ಇದೀನಿ" ಅಂದರೆ, "ಏನು ಅನಿಸಿಕೆನೊ ಏನೊ, ಅದೇ ನೆಪದಲ್ಲಿ ಮಂಗಳೂರು ಟ್ರಿಪ್ ಆಗುತ್ತೇನೊ ಅಂತ ನಾನೆಣಿಸಿದ್ದೆ" ಅಂತವಳು. "ಎಲ್ಲೊ ದೂರದ ಊರಿಗೆ ಹೋಗುತ್ತಿರುವ ಬಸ್ಸಿನಲ್ಲಿ ಒಬ್ಬನೇ ಕಿಟಕಿ ಪಕ್ಕ ಕೂತು ದೂರ ದೂರಕೆ ದಾರಿಯುದ್ದಕ್ಕೂ ನೋಡುತ್ತಿರಬೇಕು ಅನಿಸುತ್ತದೆ" ಅಂದರೆ, "ಟಿಕೆಟ್ಟು ಎಲ್ಲೀವರೆಗೆ ಅಂತ ತೆಗೆದುಕೊಳ್ಳೊದು" ಅಂತ ಕೇಳಿದ್ಲು, ನಾನು ಪಕ್ಕದ ದಾರಿ ನೋಡುತ್ತಿರುವ ಭಾವನೆ ಬಗ್ಗೆ ಮಾತಾಡುತ್ತಿದ್ದರೆ, ಇವಳಿಗೆ ಟಿಕೆಟ್ಟಿನ ಚಿಂತೆ, "ಅದು ಹಾಗಲ್ಲ" ಅಂತ ಸಮಜಾಯಿಸಿ ನೀಡಲು ಹೋದಾಗ, "ನೀವು ಹೇಳುವುದೆಲ್ಲ ಅರ್ಥವಾಗಿದೆ, ಆದರೆ ನಿಮ್ಮ ಆ ಒಂಟಿತನಕ್ಕೆ ಕಡಿವಾಣ ಹಾಕಲೇ ನಾನೀ ಕೀಟಲೆಗಿಳಿದಿದ್ದು" ಅಂದಳು. ಹೌದಲ್ಲ, ಮಾತನಾಡಲೇ ಮನಸಿಲ್ಲ ಅಂತ ಕೂತವನನ್ನು ಕೆದಕಿ ಏನೇನೊ ಮಾತಾಡಿಸಿ ಒಂಟಿತನದ ಆ ಭಾವನೆಯನ್ನೇ ದೂರ ಮಾಡಿದ್ದಳಲ್ಲ, ಇವಳು ನನ್ನೊಂದಿಗಿರುವವರೆಗೆ ನಾನೇನು ಒಬ್ಬಂಟಿಯಾಗಲಿಕ್ಕಿಲ್ಲ ಅಂತ ಅನ್ನಿಸತೊಡಗಿತ್ತು.

ಏನೊ ಒಮ್ಮೆ, ಒಂದು ದಿನ ಹೀಗೆ ಎಲ್ಲರಿಗೂ ಒಬ್ಬಂಟಿ ಅಂತ ಅನ್ನಿಸಿರಲೇಬೇಕು, ಎಲ್ಲರ ಜತೆಗಿದ್ದರೂ, ಎಲ್ಲರ ನಡುವಿದ್ದರೂ ಎಲ್ಲೊ ಕಳೆದುಹೋದಂತೆ, ಯಾರೂ ಇಲ್ಲದೇ ಒಬ್ಬಂಟಿಯಾಗಿದ್ದಂತೆ, ಏನೂ ಮಾತಾಡದೇ ಮೌನವಾಗಿ ಕೂತುಬಿಡಬೇಕು ಅಂತ ಅನಿಸಿರಬೇಕು. ಒಂದು ದಿನವಾದರೆ ಪರವಾಗಿಲ್ಲ ಆದರೆ ಹಾಗೇ ಆ ಭಾವನೆ ಉಳಿದುಹೋಗಬಾರದು, ಸಂಘಜೀವಿ ಮಾನವನೇನೂ ಒಂಟಿಸಲಗವೇನಲ್ಲ, ಒಂಟಿಯಾಗಿದ್ದವರಿಗೂ ಯಾರೋ ಒಬ್ಬ ಗೆಳೆಯನಾದರೂ ಇದ್ದೇ ಇರುತ್ತಾನೆ. ಇಲ್ಲ ಒಮ್ಮೊಮ್ಮೆ ಇನ್ನೊಂದು ತರಹದ ಭಾವನೆ, ಎಲ್ಲ ಇದ್ದರೂ ಬಿಟ್ಟು ಎಲ್ಲೋ ದೂರ ಒಬ್ಬಂಟಿಯಾಗಿ ಹೋಗಬೇಕು ಅನ್ನೊವಂತೆ, ಹಾಗೆ ಹೋಗಲೂ ಆಗುವುದಿಲ್ಲ, ಸಂಸಾರ, ಸಂಗಾತಿ, ಸ್ನೇಹಿತರು ಅಂತೆಲ್ಲ ಇರುವಾಗ, ಮತ್ತೊಂದು ದಿನ ಆ ಒಬ್ಬಂಟಿ ಬದುಕೂ ಬೇಡವಾಗಬಹುದು.

ಮಾತಿಲ್ಲದೇ, ಹಾಗೆ ಎಷ್ಟೋ ಹೊತ್ತು ಕುಳಿತಿದ್ದೆವು, ಮಾತನಾಡಬೇಕು ಅಂತ ಅನಿಸದೇ. ಮನೆಯಲ್ಲಿ ಇಬ್ಬರಿದ್ದರೂ ಯಾರಿಲ್ಲವೇನೊ ಅನ್ನೊವಂತೆ ಮನೆಯೇ ಒಬ್ಬಂಟಿಯಾಗಿತ್ತು. ಅಷ್ಟರಲ್ಲಿ ವಾಣಿ, ಅದೇ ನಮ್ಮ ದೂರವಾಣಿ ಮೊಬೈಲು ಕಿರುಚಿಕೊಂಡಳು, ನನ್ನ ಜತೆಗಾದರೂ ಮಾತಾಡಿ ಅಂತ. ನನ್ನೊಂದಿಗೇ ಮಾತಾಡುತ್ತಿಲ್ಲ ಇನ್ನು ನಿನ್ನೊಂದಿಗೇನು ಮಾತಾಡುತ್ತಾರೆ ಅಂತ ಅದರ ತಲೆಗೊಂದು ಕುಕ್ಕಿ ಪಕ್ಕಕ್ಕಿಟ್ಟಳು, ಸ್ವಲ್ಪ ಹೊತ್ತಿಗೆ ಕಾಲಿಂಗ್ ಬೆಲ್ ಕೂಗಿಕೊಂಡಿತು, ಯಾರೋ ಏಕಾಂತಕ್ಕೆ ದಾಳಿಯಿಡಲು ಬಂದರೇನೊ ಅನ್ನುವಂತೆ, ಬಾಗಿಲು ತೆರೆದರೆ ಒಬ್ಬಂಟಿ, ಒಬ್ಬ ಅಂಟಿ ಬಂದಿದ್ದರು, ಒಬ್ಬೆ ಕೂತು ಬೇಜಾರಾಗಿತ್ತು ಸುಮ್ನೇ ಹಾಗೇ ಮಾತಾಡಿಸಿಕೊಂಡು ಹೋಗೊಣವೆಂದು ಬಂದೆ ಅಂತ... ಮತ್ತೆ ಹೀಗೆ ಒಬ್ಬಂಟಿಯಾಗಿ, ಅಲ್ಲಲ್ಲ ನನ್ನಾkಯೊಂದಿಗೆ ಸಿಗುತ್ತೇನೆ...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...